**ಅಸಲು ದಾವಾ ಸಂಖ್ಯೆ:** 1211/2021
**ಪಿ.ಡಬ್ಲೂಃ** 1

**ದಿನಾಂಕಃ 09.08.2024** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 1ರವರ ಪರ ವಕೀಲರಾದ **ಶ್ರೀಃ ವಿ ಆರ್ ಟಿ** ರವರಿಂದ.

ನಾನು 2ನೇ ತರಗತಿ ಓದಿದ್ದೇನೆ. ಈ ದಾವೆ ಹೂಡಲು ವಕೀಲರಿಗೆಮಾಹಿತಿಯನ್ನು ನಾನೇ ನೀಡಿದ್ದೇನೆ. ವಾದ ಪತ್ರದಲ್ಲಿ ಬರೆದ ಅಂಶಗಳಬಗ್ಗೆ ನನಗೆ ಮಾಹಿತಿ ಇದೆ, ನಾನು ವಾದಪತ್ರ ಮತ್ತು ಪ್ರಮಾಣಪತ್ರದಲ್ಲಿನ ಅಂಶಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನನ್ನ ತಂದೆ ಮತ್ತು ಪ್ರತಿವಾದಿಯರ ತಂದೆ ಮೊಹಮ್ಮದ್ ಗೌಸ ಅತ್ತಾರ ಎಂದರೆ ಸರಿ. ನನ್ನ ತಂದೆಗೆ ನಾವು 3 ಜನ ಗಂಡು ಮಕ್ಕಳು, ನಾನು, ಮನ್ಸೂರ ಮೊಹಮ್ಮದ ಗೌಸ ಅತ್ತಾರ ಮತ್ತು ಖಾಜಾಸಾಬ ಮೊಹಮ್ಮದ ಗೌಸ ಅತ್ತಾರ. ನನ್ನ ತಂದೆ 2002ರಲ್ಲಿ ಮರಣ ಹೊಂದಿರುತ್ತಾರೆ. ದಿನಾಂಕಃ 15.05.2003ರಲ್ಲಿ ನನ್ನ ತಂದೆ ಮರಣ ಹೊಂದಿದ್ದಾರೆ ಎಂದರೆ ಇರಬಹುದು ಬಹಳ ದಿನಗಳು ಆಗಿದೆ ನೆನಪಿಲ್ಲ ಎನ್ನುತ್ತಾರೆ. ಪ್ರಸ್ತುತ ದಾವೆಯಲ್ಲಿನ ದಾವಾ ಸ್ವತ್ತಿನ ಸಂಖ್ಯೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಅಗಲ 24ಅಡಿ, ಉದ್ದ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ ದಾವಾ ಸ್ವತ್ತಿನ ಸಂಖ್ಯೆ 211 ಇರಬಹುದು, ಪೂರ್ವಕ್ಕೆ-ಮಲ್ಲೇಶಿ ಪಶ್ಚಾಪುರ ರವರ ಮನೆ, ಪಶ್ಚಿಮಕ್ಕೆ-ಮನ್ಸೂರ ಅತ್ತಾರ ರವರ ಮನೆ, ದಕ್ಷಿಣಕ್ಕೆ-ರಸ್ತೆ ಮತ್ತು ಉತ್ತರಕ್ಕೆ- ಮುಲ್ಲಾ ರವರ ಮನೆ ಇರುತ್ತದೆ ಎನ್ನುತ್ತಾರೆ. ಸದರಿ ಆಸ್ತಿಯನ್ನು ನನ್ನ ತಂದೆ ಅಡಿವೆಪ್ಪ ಕೇಶವ ಎಲಿಗಾರ ರವರಿಂದ 28.05.1987ರಲ್ಲಿ ಖರೀದಿಸಿದರು ಎಂದರೆ ಸರಿ. ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆಃ 268 ಕ್ಷೇತ್ರ 8.6X90 ಅಡಿಯನ್ನು ನನ್ನ ತಂದೆ ಅಡಿವೆಪ್ಪ ಕೇಶವ ಎಲಿಗಾರ ರವರಿಂದ 30.04.1986 ರಂದು ಖರೀದಿಸಿದ್ದರು ಎಂದರೆ ಸರಿ.

ನನ್ನ ತಂದೆ ಅಸಲು ದಾವಾ ಸಂಖ್ಯೆಃ 541/1997ನ್ನು ನನ್ನ ಚಿಕ್ಕಪ್ಪ ಮೊಹಮದ್ ಹನೀಫ ಇಮಾಮಸಾಬ ಅತ್ತಾರ ರವರ ವಿರುದ್ದ ಹೂಡಿದ್ದರು ಎಂದರೆ ಸರಿ. ಆ ದಾವೆ 05.09.2012ರಂದು ಡಿಕ್ರಿ ಆಯಿತು ಎಂದರೆ ಸರಿ. ಆ ಆದೇಶದ ವಿರುದ್ಧ ನನ್ನ ಚಿಕ್ಕಪ್ಪ

ಮತ್ತು ಅವರ ಕುಟುಂಬಸ್ಥರು ಆರ್ ಎ ನಂ.139/2012ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಆ ಆಪೀಲು ಸಹ ವಜಾ ಆಗಿ ನನ್ನ ತಂದೆ ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268 ಕ್ಕೆ ಮಾಲೀಕರು ಎಂದು ಆದೇಶವಾಯಿತು ಎಂದರೆ ಸರಿ. ಆ ಅಸಲು ದಾವೆ ಮತ್ತು ಮೇಲ್ಮನವಿಗೆ ಸಂಬಂಧಿಸಿದಂತೆ ಖರ್ಚನ್ನು ಪ್ರತಿವಾದಿ 1 ರವರೆ ಮಾಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ನಾವು 3 ಜನ ಖರ್ಚು ಮಾಡಿದ್ದೆವು ಎನ್ನುತ್ತಾರೆ. ನಮ್ಮ ತಂದೆ ಅವರ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಮೂವರ ಪರವಾಗಿ ಹಕ್ಕಬಿಟ್ಟ ಪತ್ರ ಅಥವಾ ದಾನ ಪತ್ರ ಮೃತ್ಯು ಪತ್ರ ಬರೆದುಕೊಟಿಲ್ಲ ಎಂದರೆ ಸರಿ. ನಮ್ಮ ತಂದೆಯ ಮರಣಾನಂತರ ನಾನು ಮತ್ತು ಪ್ರತಿವಾದಿಯರು ನಮ್ಮ ದಾಡಿವಾಲೆ ಮುಸ್ಲಿಂ ಜಮಾತ್ ರವರ ಸಮ್ಮುಖದಲ್ಲಿ ವಾಟ್ನಿ ಮಾಡಿಕೊಂಡು ದಾವಾ ಸ್ವತ್ತು ಪ್ರತಿವಾದಿಯರ ಭಾಗಕ್ಕೆ ಬಂದಿದ್ದು ನನಗೆ ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ಕ್ಕೆ ಬಂದಿದೆ ಎಂದರೆ ಸರಿಯಲ್ಲ, ಸಾಕ್ಷಿ ಆಸ್ತಿ ಸಂಖ್ಯೆ 268 ನನ್ನ ಹಿರಿಯ ಅಣ್ಣ ಮನ್ಸೂರ್ ಅತ್ತಾರ ರವರ ಕಬ್ಜೆಯಲ್ಲಿದೆ ಎನ್ನುತ್ತಾರೆ. ಆ ಸ್ವತ್ತನ್ನು ಈ ದಾವೆಯಲ್ಲಿ ಏಕೆ ಸೇರಿಸಲಿಲ್ಲ ಎಂದರೆ ಸಾಕ್ಷಿ ಆ ಸ್ವತ್ತು 8 ಅಡಿ 6ಇಂಚು ಅಗಲ ಇದ್ದು ಉದ್ದ 90 ಅಡಿ ಇದೆ ಅದರಲ್ಲಿನ ನಮ್ಮ ನಮ್ಮ ಭಾಗದ ಹಿಸ್ಸೆಯನ್ನು ಬಿಟ್ಟುಕೊಡಲು ಮನ್ಸೂರ್ ಅತ್ತಾರ ರವರು ಒಪ್ಪಿ ದ್ದು ಆದ್ದರಿಂದ ನಾವು ಆ ಸ್ವತ್ತನು ದಾವೆಯಲ್ಲಿ ಸೇರಿಸಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಮತ್ತು ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268 ರಲ್ಲಿ ನಾನು ಕಬ್ಜೆಯಲ್ಲಿಲ್ಲ ಎಂದರೆ ಸರಿ. ನಾನು ಹೀರೇಬಾಗೇವಾಡಿಯ ತಾಜ್ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ಬಾಡಿಗೆ ಮನೆಯಲ್ಲಿ ವಾಸವಿರುವುದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಳನ್ನು ಹಾಜರುಪಡಿಸಿದ್ದೀರಾ ಎಂದರೇ ಸಾಕ್ಷಿ ಅವುಗಳನ್ನು ಹಾಜರುಪಡಿಸುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ನಾನು ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ರಲ್ಲಿ ವಾಸವಿದ್ದರೂ ಸಹ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ ೀಎಂದು ಸುಳ್ಳು ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಾಡಿಗೆ ಮನೆಯಲ್ಲಿ ಇದ್ದು 2 ವರ್ಷಗಳಾಯಿತು ಅದಕ್ಕೂ ಮೊದಲು ನಾನು ಬೆಳಗಾವಿಯಲ್ಲಿ

ವಾಸವಿದ್ದೆ. ದಾವೆ ಹೂಡುವ ಸಮಯದಲ್ಲಿ ನಾನು ಬೆಳಗಾವಿಯಲ್ಲಿಯೇ ವಾಸವಿದ್ದೆ. ದಾವೆ ಹೂಡುವ ಸಮಯದಲ್ಲಿ ನಾನು ಬೆಳಗಾವಿಯಲ್ಲಿಯೇ ವಾಸವಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ದಾವೆ ಹೂಡುವ ಸಮಯದಲ್ಲಿ ನಾನು ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ರಲ್ಲಿ ವಾಸವಿದ್ದರೂ ಸಹ ನನ್ನ ವಿಳಾಸವನ್ನು ವಾದಪತ್ರದಲ್ಲಿ ಬಜಾರ ಗಲ್ಲಿ, ಹೀರೇಬಾಗೇವಾಡಿ ಎಂದು ತಪ್ಪಾಗಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲು ಪಾಲು ವಾಟ್ನಿಯಾಗಿ ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268 ಮತ್ತು ಮಸೀದಿ ಮುಂದೆ ಇರುವ ಚಹಾದ ಅಂಗಡಿ ನನ್ನ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ರಲ್ಲಿ ಪ್ರತಿವಾದಿ 1ರವರು ಕೊಳವೆ ಬಾವಿ ಕೊರೆಸಿದ್ದು ಅದನ್ನೂ ಸಹ ನಾನೇ ಉಪಯೋಗಿಸುತ್ತಿದ್ದೇನ ಎಂದರೆಸರಿಯಲ್ಲ ಸಾಕ್ಷಿ ನಾನು ಆ ಮನೆಯಲ್ಲಿ ವಾಸವಿಲ್ಲ ಕೊಳವೆಬಾವಿಯನ್ನು ಉಪಯೋಗಿಸುವುದು ಹೇಗೆ ಎನ್ನುತ್ತಾರೆ. ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿನ ಮನೆ ಯಾರದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದು ನಂತರ ಪ್ರತಿವಾದಿ 1 ಅಥವಾ 2 ರವರದು ಇರಬಹುದು ಎನ್ನುತ್ತಾರೆ. ಸದರಿ ಪೋಟೋದಲ್ಲಿರುವ ಮನೆಯಲ್ಲಿ ನೀವೇ ವಾಸವಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಪ್ರತಿವಾದಿ 2 ರವರು ವಾಸವಿದ್ದಾರೆ ಎನ್ನುತ್ತಾರೆ. ಮೊದಲು ನನ್ನ ಮತ್ತು ಪ್ರತಿವಾದಿಯರ ಮಧ್ಯೆ ಪಾಲು ವಾಟ್ನಿಯಾಗಿದ್ದು ನಮ್ಮ ಭಾಗದ ಹಿಸ್ಸೆಯಲ್ಲಿ ಮನೆ ಕಟ್ಟಿಕೊಂಡು ಅಭಿವೃದ್ಧಿಪಡಿಸಿಕೊಂಡು ವಾಸವಿದ್ದೇವೆ ಎಂದರೆ ಸರಿಯಲ್ಲ. ಈ ಮೊದಲು ಪಾಲು ವಾಟ್ನಿಯಾಗಿದ್ದರು ಸಹ ಪಾಲು ವಾಟ್ನಿಯಾಗಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ರಲ್ಲಿ ವಾಸವಿದ್ದರೂ ಸಹ ಸುಳ್ಳು ಚೆಕ್ಕುಬಂದಿಯನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಇಲ್ಲಿಯವರೆಗೂ ನನ್ನ ಮತ್ತು ಪ್ರತಿವಾದಿಯರ ಮಧ್ಯೇ ಪಾಲು ವಾಟ್ನಿಯಾಗಿಲ್ಲ ಆಸ್ತಿ ಸಂಖ್ಯೆ (ಹಳೆಯ ಸಂಖ್ಯೆ 210 ಮತ್ತು 285) ಹೊಸ ಸಂಖ್ಯೆ: 268ರಲ್ಲಿ ಪ್ರತಿವಾದಿ 1ರವರ

ಹಿಸ್ಸೆ ಸಹ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ಪ್ರತಿವಾದಿ 2 ರವರಿಗೆ ಕೇಳಿ ಎನ್ನುತ್ತಾರೆ. ಪ್ರತಿವಾದಿ 1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ. ಸರಿಯಿದೆ.

ಸಹಿ/-
**4ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಬೆಳಗಾವಿ.**